<u>ಕರ್ನಾಟಕ ವಿಧಾನ ಪರಿಷತ್ತು</u>

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 890**

**ಉತ್ತರಿಸಬೇಕಾದ ದಿನಾಂಕ : 19-08-2025**

**ಉತ್ತರಿಸಬೇಕಾದ ಸಚಿವರು : ಮಾನ್ಯ ಮುಖ್ಯಮಂತ್ರಿ**

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಸಹಕಾರ ಕಾಯ್ದೆಗಳಡಿ ಸಹಕಾರ ಸಂಘಗಳು ಸಾಲವನ್ನು ವಸೂಲಿ ಮಾಡುವ ನಿಯಮಗಳು ಯಾವುವು; ಸಹಕಾರಿ ಸಂಘಗಳಲ್ಲಿ ಯಾವ ವಿಧದ ಸಾಲಗಳನ್ನು ನೀಡಲಾಗುತ್ತದೆ; ಅದಕ್ಕೆ ಯಾವ ರೀತಿಯ ಭದ್ರತೆಯನ್ನು ಮತ್ತು ಅಡಮಾನವನ್ನು ಹೊಂದಿರುತ್ತದೆ; | ರಾಜ್ಯದಲ್ಲಿ ಸಹಕಾರ ಕಾಯ್ದೆಗಳಡಿ ಸಹಕಾರ ಸಂಘಗಳು ಸಾಲವನ್ನು ವಸೂಲಿ ಮಾಡುವ ನಿಯಮಗಳು ಈ ಕೆಳಕಂಡಂತಿವೆ.<br>1) ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 70ರಡಿ ಸಾಲ ವಸೂಲಾತಿಗೆ ಪಂಚಾಯತ್ ದಾವಾ ಪ್ರಕರಣವನ್ನು ದಾಖಲಿಸುವುದು.<br>2) ಪಂಚಾಯತ್ ದಾವಾ ಪ್ರಕರಣದಲ್ಲಿ ಹೊರಡಿಸಿದ ಅವಾರ್ಡ್/ಡಿಕ್ರಿ ಆದೇಶವನ್ನು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 99,100,101, 101-ಎ,101-ಬಿ ರಡಿಗಳ ಅವಕಾಶಗಳಂತೆ ಹಾಗೂ ಕರ್ನಾಟಕ ಸಹಕಾರ ಸಂಘಗಳ ನಿಯಮಾವಳಿಗಳು 1960 ರ ನಿಯಮ 33-ಬಿ ರಿಂದ 49 ರವರೆಗಿನ ಅವಕಾಶಗಳಂತೆ ಅಮಲ್ಜಾರಿ ಪ್ರಕರಣ/ಇ.ಪಿ. ದಾಖಲಿಸಿ ಸಾಲದ ಭದ್ರತೆಗೆ ನೀಡಿದ ಚರ/ಸ್ಥಿರಾಸ್ತಿಗಳನ್ನು ಹರಾಜು /ವರ್ಗಾವಣೆ ಮಾಡುವ ಮೂಲಕ ವಸೂಲಿ ಮಾಡಲು ಅವಕಾಶ ಇರುತ್ತದೆ.<br>**ಸಹಕಾರ ಸಂಘಗಳಲ್ಲಿ ಈ ಕೆಳಕಂಡ ವಿಧದ ಸಾಲಗಳನ್ನು ನೀಡಲಾಗುತ್ತಿದೆ.**<br>1) ಅಲ್ಪಾವಧಿ ಕೃಷಿ ಸಾಲ<br>2) ಮಧ್ಯಮಾವಧಿ/ದೀರ್ಘಾವಧಿ ಕೃಷಿ ಸಾಲ<br>3) ವೇತನ ಆಧಾರಿತ ಸಾಲ<br>4) ಪಿಗ್ಮಿ ಆಧಾರಿತ ಸಾಲ<br>5) ವಾಹನ ಸಾಲ<br>6) ಆಭರಣಗಳ ಸಾಲ<br>7) ಗೃಹೋಪಯೋಗಿ ವಸ್ತುಗಳ ಖರೀದಿ ಸಾಲ<br>8) ಸ್ವ-ಸಹಾಯ ಗುಂಪುಗಳಿಗೆ ಸಾಲ<br>9) ಜಂಟಿ ಬಾಧ್ಯತಾ ಗುಂಪುಗಳಿಗೆ ಸಾಲ<br>10) ಆಸ್ತಿ ಅಡಮಾನ ಸಾಲ<br>11) ಗೃಹ ನಿರ್ಮಾಣ ಸಾಲ<br>12) ನಿವೇಶನ ಖರೀದಿ ಸಾಲ |

| | | |
|---|---|---|
| | | ಇಂತಹ ಸಾಲಗಳಿಗೆ ಸಾಲದ ಭದ್ರತೆಗಾಗಿ ಸಾಲದ ಅರ್ಜಿ/ಬಾಂಡ್, ಚರ/ಸ್ಥಿರಾಸ್ತಿಗಳ ಉತಾರ/ಜಮೀನಿನ ಉತಾರ ಹಾಗೂ ಜಾಮೀನುದಾರರು, ವೇತನಕ್ಕೆ ಸಂಬಂಧಿಸಿದಂತೆ ವೇತನ ದಾಖಲಾತಿಗಳು ಮತ್ತು ವಾಹನ ಸಾಲಕ್ಕೆ ಆರ್.ಸಿ ಬುಕ್, ಇನ್ಶೂರೆನ್ಸ್ ಮತ್ತು ವಾಹನದ ಕೀಲಿ ಕೈ ಹೀಗೆ ಎಲ್ಲ ಸಾಲಗಳಿಗೆ ಸಾಲಗಾರ/ಜಾಮೀನುದಾರರ ಫೋಟೋ ಹಾಗೂ ಕೆ.ವೈ.ಸಿ ದಾಖಲಾತಿಗಳನ್ನು ಕಡ್ಡಾಯವಾಗಿ ಸಾಲದ ಭದ್ರತೆಗೆ ಪಡೆದುಕೊಳ್ಳಲಾಗುತ್ತದೆ. |
| ಆ) | ಸಹಕಾರಿ ನಿಯಮಗಳಂತೆ ಸಹಕಾರಿ ಸಂಘಗಳು ಸಾಲ ವಸೂಲಾತಿಗಾಗಿ ನೆಗೋಶಬಲ್ ಇನ್ಸ್ಟ್ರುಮೆಂಟ್ಸ್ ಆಕ್ಟ್ 1881 ರಂತೆ ಚೆಕ್ಕನ್ನು ಹಾಜರುಪಡಿಸಿ ಚೆಕ್ ಅಮಾನ್ಯಗೊಂಡ ಪ್ರಕರಣದಂತೆ ವಸೂಲಿಗೆ ಕ್ರಮ ವಹಿಸಬಹುದೇ; (ವಿವರ ನೀಡುವುದು) | ಹೌದು.<br>ಸಾಲಗಾರರು ಸಾಲದ ಮರುಪಾವತಿಗೆ ಹಾಗೂ ಅಸಲು & ಬಡ್ಡಿಯ ಕಂತನ್ನು ಮರುಪಾವತಿಗಾಗಿ ಸಲ್ಲಿಸಿದ ಚೆಕ್ ನ್ನು ನಗದೀಕರಣಕ್ಕಾಗಿ ಸಂಬಂಧಿಸಿದ ಬ್ಯಾಂಕಿಗೆ ಸಲ್ಲಿಸಿದಾಗ ಖಾತೆಯಲ್ಲಿ ಹಣವಿಲ್ಲದೆ ಚೆಕ್ ವಾಪಸ್ ಆದಾಗ ಸಾಲಗಾರನಿಗೆ ಕಾನೂನು ಬದ್ಧ ನೋಟೀಸ್‌ನ್ನು ಜಾರಿಗೊಳಿಸಿದ ನಂತರ ಸಾಲಗಾರನಿಂದ ಯಾವುದೇ ಪ್ರತಿಕ್ರಿಯೆ ದೊರೆಯದಿದ್ದಲ್ಲಿ ನೋಟೀಸ್ ನೀಡಿದ 01 (ಒಂದು) ತಿಂಗಳ ಅವಧಿಯೊಳಗಾಗಿ ಸಾಲಗಾರನ ವಿರುದ್ಧ ನೆಗೋಶಿಯೆಬಲ್ ಇನ್ಸ್ಟ್ರುಮೆಂಟ್ಸ್ (ಎನ್.ಐ) ಕಾಯ್ದೆ ಕಲಂ 138 ರ ಪ್ರಕಾರ ಸಾಲಗಾರನ ಮೇಲೆ ಚೆಕ್ ಬೌನ್ಸ್ ಪ್ರಕರಣವನ್ನು ಸಂಬಂಧಿಸಿದ ನ್ಯಾಯಾಲಯದಲ್ಲಿ ದಾಖಲಿಸಿ ಸಾಲ ವಸೂಲಾತಿಯನ್ನು ಮಾಡಿಕೊಳ್ಳಲು ಅವಕಾಶವಿರುತ್ತದೆ. |
| ಇ) | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಸಹಕಾರಿ ಸಂಘಗಳು ಸಾಲ ವಸೂಲಾತಿಗಾಗಿ ಚೆಕ್ ಅಮಾನ್ಯ ಪ್ರಕರಣ ದಾಖಲಿಸುವ ಮೂಲಕ ವಸೂಲಿಗೆ ಕ್ರಮವಹಿಸಿದ ಪ್ರಕರಣಗಳ ಸಂಖ್ಯೆ ಎಷ್ಟು: | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಸಹಕಾರಿ ಸಂಘಗಳು ಸಾಲ ವಸೂಲಾತಿಗಾಗಿ ನೆಗೋಶಿಯೆಬಲ್ ಇನ್ಸ್ಟ್ರುಮೆಂಟ್ಸ್ ಆಕ್ಟ್ 1881 ರ ಪ್ರಕಾರ ಚೆಕ್ ಅಮಾನ್ಯ ಪ್ರಕರಣ ಸಿವಿಲ್ ನ್ಯಾಯಾಲಯದಲ್ಲಿ ದಾಖಲಿಸುತ್ತವೆ. ಪ್ರಕರಣಗಳ ಮಾಹಿತಿಯನ್ನು **ಅನುಬಂಧದಲ್ಲಿ** ನೀಡಲಾಗಿದೆ. |
| ಈ) | ಒಂದು ಸಾಲ ವಸೂಲಿಗಾಗಿ ಅಡಮಾನ ಆಸ್ತಿಯನ್ನು ಹರಾಜು ಮಾಡುವ ಪ್ರಕ್ರಿಯೆ ಮತ್ತು ಚೆಕ್ ಅಮಾನ್ಯ ನಿಯಮಗಳಡಿ ಕ್ರಮ ಜರುಗಿಸುವುದು ಈ ರೀತಿ ಎರಡೂ ಸಾಲ ವಸೂಲಿ ಕ್ರಮಗಳನ್ನು ಏಕ ಕಾಲದಲ್ಲಿ ಮಾಡಲು ಅವಕಾಶವಿದೆಯೇ; | ಪ್ರಕರಣದ ವಸ್ತುಸ್ಥಿತಿ ಅನುಗುಣವಾಗಿ, ಒಂದೇ ಸಮಯದಲ್ಲಿ ಎರಡು ರೀತಿಯ ವಸೂಲಾತಿ ಕ್ರಮ ಕೈಗೊಳ್ಳಬಹುದಾಗಿದೆ.<br>ನೆಗೋಶಿಯೆಬಲ್ ಇನ್ಸ್ಟ್ರುಮೆಂಟ್ಸ್ (ಎನ್.ಐ) ಕಾಯ್ದೆ 1881 ರ ಕಲಂ 138ರ ಪ್ರಕಾರ ಸಾಲಗಾರನ ಮೇಲೆ ಚೆಕ್ ಬೌನ್ಸ್‌ಗೆ ಸಂಬಂಧಿಸಿದಂತೆ ಸಂಬಂಧಪಟ್ಟ ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲಿಸಬಹುದು ಹಾಗೂ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ರಡಿಯ ಅವಕಾಶಗಳಂತೆ ದಾವಾ ಪಂಚಾಯಿತಿ ಆದೇಶ ಪಡೆದು ಅಮಲ್ಜಾರಿ ಪ್ರಕರಣದ ಮೂಲಕ ವಸೂಲಾತಿ ಕ್ರಮ ಜರುಗಿಸಲು ಅವಕಾಶವಿದೆ. |

| | | |
|---|---|---|
| ಉ) | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಈ ರೀತಿಯ ಎಷ್ಟು ಪ್ರಕರಣಗಳು ಇಲಾಖೆಯ ಗಮನಕ್ಕೆ ಬಂದಿವೆ; ಹಾಗೂ ಈ ರೀತಿಯ ಕೃಷಿಕರ ಶೋಷಣೆ ತಡೆಗಟ್ಟಲು ಯಾವ ರೀತಿ ಕ್ರಮ ಕೈಗೊಳ್ಳಲಾಗಿದೆ? (ವಿವರ ನೀಡುವುದು) | ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿ ಕೃಷಿಯೇತರ ಉದ್ದೇಶಕ್ಕೆ ಪಡೆದಿರುವ ಸಾಲ ವಸೂಲಾತಿ ಪ್ರಕರಣಗಳು ಇರುತ್ತವೆ ಹೊರತು ರೈತರಿಗೆ ಸಂಬಂಧಿಸಿದ ಪ್ರಕರಣಗಳು ಇರುವುದಿಲ್ಲ. |

**ಕಡತ ಸಂಖ್ಯೆ: ಸಿಒ 230 ಸಿಎಲ್‌ಎಸ್ 2025**

(ಸಿದ್ದರಾಮಯ್ಯ)
ಮುಖ್ಯಮಂತ್ರಿ

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:767(890)ಕ್ಕೆ ಅನುಬಂಧ

| ಕ್ರ.ಸಂ | ಜಿಲ್ಲೆಯ ಹೆಸರು | ನೆಗೋಶಬಲ್ ಇನ್‌ಸ್ಟ್ರಮೆಂಟ್ಸ್ ಆಕ್ಟ್ 1881 ರಂತೆ ಚೆಕ್ ಅಮಾನ್ಯಗೊಂಡಿರುವ ಪ್ರಕರಣದ ವಿವರ | | ಸದರಿ ಚೆಕ್ ಅಮಾನ್ಯಗೊಂಡಿರುವ ಪ್ರಕರಣಗಳಲ್ಲಿ ವಸೂಲಾತಿ ಪ್ರಕರಣಗಳ ವಿವರ | | ಸದರಿ ಚೆಕ್ ಅಮಾನ್ಯಗೊಂಡಿರುವ ಪ್ರಕರಣಗಳಲ್ಲಿ ವಸೂಲಾತಿಗೆ ಬಾಕಿ ಇರುವ ಪ್ರಕರಣಗಳ ವಿವರ | | ಸದರಿ ಚೆಕ್ ಅಮಾನ್ಯಗೊಂಡಿರುವ ಪ್ರಕರಣಗಳಲ್ಲಿ ವಸೂಲಾತಿ ಮಾಡಲು ಸಾಧ್ಯವಾಗದ ಕುರಿತು ಕಾರಣ | ಷರಾ |
|---|---|---|---|---|---|---|---|---|---|
| | | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | | |
| 1 | ದಕ್ಷಿಣ ಕನ್ನಡ | 1513 | 431547800.00 | 384 | 263225603.00 | 1129 | 168322197.00 | - | - |
| 2 | ಉಡುಪಿ | 1573 | 486677251.00 | 316 | 97409878.00 | 1257 | 389267373.00 | - | - |
| ಒಟ್ಟು | | **3086** | **918225051.00** | **700** | **360635481.00** | **2386** | **557589570.00** | - | - |

ಸಹಕಾರ ಸಂಘಗಳ ಜಂಟಿ ನಿಬಂಧಕರು,

ಕಾನೂನು ಕೋಶ